**1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸ್ಪೆಷಲ್ ಮೊಕದ್ದಮೆ ನಂಃ 83/2018

| | | |
|---|---|---|
| ಸಾಕ್ಷಿದಾರರ ಹೆಸರು | - ಮಂಜುನಾಥ ಆರ್ | ಪಿಡಬ್ಲೂ - 10 |
| ತಂದೆಯ ಹೆಸರು | - ರಾಮಚಂದ್ರ | ಸಿಡಬ್ಲೂ - 18 |
| ವಯಸ್ಸು | - 34 ವರ್ಷ | |
| ಉದ್ಯೋಗ | - ಗುಪ್ತಚರ ಸಹಾಯಕ, ರಾಜ್ಯ ಗುಪ್ತ ವಾರ್ತಾ ಇಲಾಖೆ, ಬೆಂಗಳೂರು | |
| ವಾಸ ಸ್ಥಳ | - ಬೆಂಗಳೂರು | |

ದಿನಾಂಕಃ 13.08.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನಾನು 2017 ಡಿಸೆಂಬರ್ 2017 ರಿಂದ ಜುಲೈ 2018 ರವರೆಗೆ ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 10.01.2018 ರಂದು ಈ ಪ್ರಕರಣದ ತನಿಖಾ ಕಾಲದಲ್ಲಿ ತನಿಖಾಧಿಕಾರಿಗಳಾದ ಚಾಸಾ.20 ರವರು ಸಾಕ್ಷಿಗಳನ್ನು ವಿಚಾರಿಸಿ ಅವರ ಹೇಳಿಕೆಗಳನ್ನು ಪಡೆಯುವ ಸಮಯದಲ್ಲಿ ನಾನು ಅವರ ಸೂಚನೆಯ ಮೇರೆಗೆ ಇಲಾಖೆಗೆ ಒದಗಿಸಲಾಗಿದ್ದ ಕ್ಯಾಮರಾ ದಲ್ಲಿ ವಿಡೀಯೋವನ್ನು ಚಿತ್ರೀಕರಿಸಿರುತ್ತೇನೆ.

3. ನಂತರ ಸದರಿ ವಿಡೀಯೋವನ್ನು ಕಚೇರಿಗೆ ಒದಗಿಸಲಾಗಿದ್ದ ಕಂಪ್ಯೂಟರ್ ಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿ ನಂತರ ಸದರಿ ವಿಡೀಯೋಗಳನ್ನು ಒಂದು ಖಾಲಿ ಡಿವಿಡಿಗೆ ಯಥಾಸ್ಥಿತಿಯಲ್ಲಿ

ವರ್ಗಾಯಿಸಿ ಅದನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸದರಿ ಡಿವಿಡಿಯನ್ನು ನೋಡುತ್ತಿದ್ದು ಅದನ್ನು ನಿಪಿ.14 ಎಂದು ಗುರುತಿಸಲಾಯಿತು.

4. ನಂತರ ಅದೇ ದಿನ ತನಿಖಾಧಿಕಾರಿಗಳಿಗೆ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ.15 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು.

5. ದಿಃ 26.03.2018 ರಂದು ಚಿಕ್ಕಮಗಳೂರಿನ ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರಾದ ಎಂ ವೈ ರವಿಕುಮಾರ್ ರವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ ಐ ಎಸ್ ಟಿ ವಕೀಲರಿಂದಃ ಆರೋಪಿತರ ಪರವಾಗಿ</u>

6. ವಿಡೀಯೋವನ್ನು ಚಿತ್ರೀಕರಿಸಲು ಮತ್ತು ಕೃತ್ಯ ನಡೆದ ಸ್ಥಳವನ್ನು ತೋರಿಸಲು ನನಗೆ ಲಿಖಿತ ಆದೇಶ ಇರಲಿಲ್ಲ. ನೀವು ವಿಡೀಯೋವನ್ನು ಚಿತ್ರೀಕರಿಸಿದ್ದೀರಿ ಎಂದು ಹೇಳಲಾದ ಕ್ಯಾಮರಾ ಯಾವ ಕಂಪನಿಗೆ ಸೇರಿದ್ದು ಮತ್ತು ಯಾರ ವಶದಲ್ಲಿತ್ತು ಎಂದು ನಿಪಿ.15 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಕ್ಯಾಮರಾದಲ್ಲಿ ಮೆಮೋರಿ ಕಾರ್ಡ್ ಇತ್ತೇ, ಇದ್ದರೆ ಯಾವ ಕಂಪನಿಗೆ ಸೇರಿದ್ದು ಮತ್ತು ಅದು ಎಷ್ಟು ಸಾಮರ್ಥ್ಯವನ್ನು ಒಳಗೊಂಡಿತ್ತು ಎಂದು ನಿಪಿ.15 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಮೆಮೋರಿ ಕಾರ್ಡಿನಲ್ಲಿ ಬೇರೆ ಮಾಹಿತಿ ಇದ್ದ

ಬಗ್ಗೆ ನಿಪಿ.15 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಯವಾ ಸಾಫ್ಟ್ ವೇರನ್ನು ಬಳಸಿ, ಯಾವ ಫೋಲ್ಡಾರ್ ಗೆ ವಿಡೀಯೋಗಳನ್ನು ವರ್ಗಾಯಿಸಲಾಯಿತು ಎಂದು ನಿಪಿ.15 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನೀವು ವಿಡೀಯೋಗಳನ್ನು ವರ್ಗಾಯಿಸಿದ್ದೀರಿ ಎಂದು ಹೇಳಲಾದ ಡಿವಿಡಿ ಯಾವ ಕಂಪನಿಗೆ ಸೇರಿದ್ದು ಎಂದು ಮತ್ತು ಅದರ ಕೆಪಾಸಿಟಿ ಎಷ್ಟು ಎಂದು ನಿಪಿ.15 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ.14 ರ ಮೇಲೆ ನೀವೆ ಸದರಿ ಡಿವಿಡಿಯಲ್ಲಿರುವ ವಿಡೀಯೋಗಳನ್ನು ವರ್ಗಾಯಿಸಿದ್ದೀರಿ ಎಂಬ ಬಗ್ಗೆ ಸಹಿ ಮಾಡಿಲ್ಲ ಎಂದರೆ ಸರಿ.

7. ಸಾಮಾನ್ಯವಾಗಿ ಇಲಾಖೆಗೆ ಒದಗಿಸಲಾಗಿರುವ ಕ್ಯಾಮಾರಾಗಳಲ್ಲಿ ಪೋಟೋ ಮತ್ತು ವಿಡೀಯೋಗಳನ್ನು ಚಿತ್ರೀಕರಿಸಿದ ಸಮಯ ಮತ್ತು ದಿನಾಂಕ ನಮೂದಾಗುತ್ತದೆ ಎಂದರೆ ಸರಿ. ನಿಪಿ.14 ರಲ್ಲಿ ಕಂಡು ಬರುವ ವಿಡೀಯೋಗಳಲ್ಲಿ ಅವುಗಳನ್ನು ಚಿತ್ರೀಕರಿಸಿದ ಸಮಯ ಮತ್ತು ದಿನಾಂಕ ನಮೂದಾಗಿಲ್ಲ ಎಂದರೆ ಸರಿ.

8. ದಿಃ 10.01.2018 ರಂದು ಮಹಜರ್ ಜರುಗಿಸುವ ಸಮಯದಲ್ಲಿ ನಾನು ತನಿಖಾದಿಕಾರಿಗಳೊಂದಿಗೆ ಸ್ಥಳಕ್ಕೆ ಹೋಗಿದ್ದರಿಂದ ನನಗೆ ಸದರಿ ಸ್ಥಳದ ಬಗ್ಗೆ ಮಾಹಿತಿ ಇತ್ತು. ನೀವು ಹೇಳಿದಂತೆ ಇಂಜಿನಿಯರ್ ರವರು ನಿಮ್ಮ ಠಾಣೆಯಲ್ಲಿ ನಕ್ಷೆಯನ್ನು ತಯಾರಿಸಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅವರಿಗೆ ಸ್ಥಳವನ್ನು ತೋರಿಸಿದ್ದೀರಿ ಎಂದು ಹೇಳಲಾದ ಸಮಯದಲ್ಲಿ ಯಾವುದೇ ದಾಖಲೆಗೆ ಸಹಿ ಮಾಡಿಲ್ಲ ಮತ್ತು ಆ ಬಗ್ಗೆ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿ. ನೀವು

ಹೇಳಿದಂತೆ ಯಾವುದೇ ವಿಡೀಯೋಗಳನ್ನು ಚಿತ್ರೀಕರಿಸಿಲ್ಲ ಮತ್ತು ಯಾವುದೇ ಸ್ಥಳವನ್ನು ಇಂಜಿನಿಯರ್ ರವರಿಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮಾತು ಕೇಳಿ ನಿಪಿ.14 ಮತ್ತು ನಿಪಿ.15 ರಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ